ವಾಸ್ತವ ಬದುಕಿಗೂ ಸಂಬಂಧ ಇದೆಯೆ? ಇಲ್ಲವಲ್ಲ. ನೀನು ಕಲ್ಪಿಸದ ಅನೇಕ ಘಟನೆಗಳು ನಿನ್ನ ಹೆಸರಿನಲ್ಲಿ ದಾಖಲಾಗಿವೆ. ನೀನು ಜನರ ಕಣ್ಣು ಮುಚ್ಚಬಹುದು. ಆದರೆ, ನಿನ್ನ ಅಂತರಾತ್ಮದ, ನಿನ್ನ ಆತ್ಮಸಾಕ್ಷಿಯ ಮತ್ತು ನಿನ್ನ ವಿವೇಕದ ಕಣ್ಣು ಮುಚ್ಚಲಾರೆ. ಜಗತ್ತು ನಿನ್ನನ್ನು ಒಪ್ಪಬಹುದು. ಆದರೆ, ಅಂತರಾತ್ಮ ನಿನ್ನನ್ನು ಒಪ್ಪಬೇಕಲ್ಲ? ಇಡೀ ಜಗತ್ತು ಒಪ್ಪಿ ನಿನ್ನ ಅಂತರಾತ್ಮ ಒಪ್ಪದಿದ್ದರೆ ನಿನ್ನ ಬದುಕಿಗೆ ಅರ್ಥವಿಲ್ಲ. ಜಗತ್ತು ಒಪ್ಪದಿದ್ದರೂ ನಿನ್ನ ಮನಸ್ಸು ಒಪ್ಪಿದರೆ ನಿನ್ನ ಜನ್ಮ ಸಾರ್ಥಕ. ನೀನು ಸುಳ್ಳಿನ ಮನೆಯಲ್ಲಿ ಬದುಕುತ್ತಿರುವೆ. ಈಗಲಾದರೂ ಸತ್ಯದಿಂದ ಬದುಕು. ಈ ಆತ್ಮಚರಿತ್ರೆಯನ್ನು ಸುಟ್ಟು ಹಾಕು. ನಿನ್ನ ಆತ್ಮಸಾಕ್ಷಿ ಒಪ್ಪುವಂತೆ ಬದುಕು. ಯಾವಾಗ ನಿನ್ನ ಬಹಿರಂಗ ಮತ್ತು ಅಂತರಂಗ ನಿನ್ನ ಕೆಲಸಕ್ಕೆ ಅಹುದು ಎಂದು ಸಾಕ್ಷಿ ನುಡಿಯುತ್ತವೆಯೋ ಆಗ ನೀನು ಆತ್ಮಚರಿತ್ರೆ ಬರೆಯಬಹುದು' ಎಂದು ಹೇಳಿ ಮಂತ್ರಿಯ ಅಂತರಾತ್ಮ ಇದ್ದಕ್ಕಿದ್ದಂತೆ ಮೌನವಾಯಿತು. ತಾನು ಮಲಗುವ ಕೋಣೆಯಲ್ಲಿ ಮಂತ್ರಿಗಷ್ಟೇ ಕೇಳುವ ಹಾಗೆ ಅಂತರಾತ್ಮ ಹೇಳಿದ್ದರೂ ಅತ್ಯಂತ ಜನಪ್ರಿಯ ದೂರದರ್ಶನದ ಮೇಲೆ ನುರಿತ ನಿರೂಪಕಿ ಗಂಟಲು ಹರಿಯುವಂತೆ ಹೇಳಿದ ಹಾಗೆ ಮಂತ್ರಿಗೆ ಭಾಸವಾಯಿತು. ಆದರೆ, ಅಂತರಾತ್ಮದ ಮಾತನ್ನು ಮಂತ್ರಿಗಳ ಮನಸ್ಸು ಒಪ್ಪಲಿಲ್ಲ. ಸುಳ್ಳಿನ ಸುಖ ಸವಿಯುತ್ತ ಮಂತ್ರಿಗಳು ನಿದ್ರೆ ಹೋದರು.

ಮಂತ್ರಿಗಳನ್ನು ಬಹಳ ಹತ್ತಿರದಿಂದ ಬಲ್ಲ ಒಬ್ಬ ಪತ್ರಕರ್ತನಿದ್ದ. ಅವನು ಮಂತ್ರಿಗಳ ನೀಚತನ, ಭ್ರಷ್ಟತನ, ಅನೈತಿಕತೆ ಮತ್ತು ಭಯಾನಕ ಪಾಪಕೃತ್ಯಗಳ ಬಗೆಗೆ ನಿಖರವಾದ ದಾಖಲೆಗಳನ್ನು ಸಂಗ್ರಹಿಸಿದ್ದ. ಮಂತ್ರಿಗಳ ಆತ್ಮಚರಿತ್ರೆ ಪ್ರಕಟಗೊಂಡ ವಿಷಯ ತಿಳಿದು ಅದರ ಒಂದು ಪ್ರತಿ ಖರೀದಿಸಿ ಓದಿ ದಿಗ್ಭ್ರಮೆಗೊಂಡ. ಇಂಥ ಖೊಟ್ಟಿ ಮಂತ್ರಿಯ ಬಂಡವಾಳ ಬಯಲು ಮಾಡದಿದ್ದರೆ ಸಮಾಜಕ್ಕೆ ತಪ್ಪು ಸಂದೇಶ ಹೋಗುತ್ತದೆ. ಹಣದಿಂದ ಏನೆಲ್ಲಾ ಕೊಂಡುಕೊಳ್ಳಬಲ್ಲೆ ಎಂಬ ಭ್ರಷ್ಟರನ್ನೇ ಸುಶಿಕ್ಷಿತರು, ಸುಸಂಸ್ಕೃತರು ಎಂದು ಜನರು ಭಾವಿಸಿದರೆ ಸಾಹಿತ್ಯಕ, ಸಾಂಸ್ಕೃತಿಕ ದಿವಾಳಿತನ ಆಗುತ್ತದೆ. ಇದನ್ನು ತಪ್ಪಿಸಲು ಮತ್ತು ಬರಹದ, ಪಾಂಡಿತ್ಯದ ಮಾನ ಕಾಪಾಡಲು ತಾನೇ ಈ ಮಂತ್ರಿಯ ಬಗೆಗೆ ಒಂದು ಪುಸ್ತಕ ಬರೆಯಬೇಕೆಂದು ನಿಶ್ಚಯಿಸಿ ರಾಜ್ಯದ ಮೂಲೆ ಮೂಲೆಗಳಲ್ಲಿ ತಿರುಗಿ ಮಂತ್ರಿಗಳ ಬಗೆಗೆ ಮಾಹಿತಿ ಸಂಗ್ರಹಿಸಿ ಅವರ ಜೀವನಚರಿತ್ರೆ ಬರೆದ. ಜೀವನಚರಿತ್ರೆ ನಿನ್ನೆಯಷ್ಟೇ ಮುದ್ರಣಗೊಂಡಿತ್ತು. ಅದರ ಒಂದು ಪ್ರತಿಯನ್ನು ಮಂತ್ರಿಗಳ ಕೈಗೆ ಸಿಗುವಂತೆ ಪತ್ರಕರ್ತ ನೋಡಿಕೊಂಡಿದ್ದ.

ರಾತ್ರಿ ಊಟ ಮಾಡಿ ಹಾಸಿಗೆಯಲ್ಲಿ ಒರಗಿದಾಗ ಟೇಬಲ್ ಮೇಲಿಡಲಾದ ಹಸಿರು ಬಣ್ಣದ ಲಕೋಟೆಯ ಕಡೆಗೆ ಮಂತ್ರಿಗಳ ಗಮನ ಹೋಯಿತು. ಹೊಸ ಲಕೋಟೆ ಎಲ್ಲಿಂದ ಬಂತು? ಅದರಲ್ಲಿ ಏನಿರಬಹುದು? ಎಂಬ ಕುತೂಹಲ ತಡೆಯದೆ ಎದ್ದು ಹೋಗಿ ಆ ಲಕೋಟೆ ಎತ್ತಿಕೊಂಡು ಹಾಸಿಗೆಗೆ ಬಂದು ಅದನ್ನು ಬಿಚ್ಚಿ ನೋಡಿದರು. ಅದರಲ್ಲಿ ಒಂದು ಪುಸ್ತಕವಿತ್ತು. ಅದರ ಮೇಲೆ ಮಂತ್ರಿಯ ಫೋಟೊ ಅಚ್ಚಾಗಿತ್ತು. ಮುಖಪುಟದ ಮೇಲೆ ಮಂತ್ರಿಯ ಹೆಸರು, ಹೆಸರಿನ ಕೆಳಗೆ ಜೀವನಚರಿತ್ರೆ ಎಂಬ ಶೀರ್ಷಿಕೆ ಕಂಡಿತು. ಅದರ ಕೆಳಗೆ ಲೇಖಕರ ಹೆಸರಿತ್ತು. ಪತ್ರಕರ್ತನ ಹೆಸರು ನೋಡುತ್ತಿದ್ದಂತೆ ಮಂತ್ರಿಗಳ ಎದೆ ನಡುಗಿತು, ದೇಹ ಕಂಪಿಸಿತು ಮತ್ತು ಮನಸ್ಸು ಭಯದಿಂದ ಮುದುಡಿತು. ಅವರು ಒಂದರ ಮೇಲೊಂದರಂತೆ ನಿಟ್ಟುಸಿರು ಬಿಟ್ಟರು. ಈ ಪತ್ರಕರ್ತ ಮಂತ್ರಿಗಳಿಗೆ ಬಹಳ ಚೆನ್ನಾಗಿ ಗೊತ್ತಿದ್ದ. ಎಂಥ ಸಂದರ್ಭದಲ್ಲೂ ಅವರ ಬಗೆಗೆ ಒಂದು ಒಳ್ಳೆಯ ಮಾತೂ ಅವನು ಬರೆದವನಲ್ಲ, ಹೆಜ್ಜೆಹೆಜ್ಜೆಗೂ ಅವರನ್ನು ಕಟುವಾಗಿ ಟೀಕಿಸಿದವನು, ವ್ಯಂಗ್ಯ, ಕುಹಕ ಮಾಡಿದವನು. ಇಂಥ ವ್ಯಕ್ತಿ ತಮ್ಮ ಜೀವನಚರಿತ್ರೆ ಹೇಗೆ ಬರೆದ? ತಮ್ಮನ್ನು ಒಮ್ಮೆಯೂ ಸಂಪರ್ಕಿಸದೆ, ತಮ್ಮಿಂದ ಯಾವ ಮಾಹಿತಿಯನ್ನೂ ಪಡೆಯದೆ ಹೇಗೆ ತಮ್ಮ ಜೀವನಚರಿತ್ರೆ ಬರೆಯಲು ಸಾಧ್ಯ? ಎಂದು ಮಂತ್ರಿಗಳು ಚಿಂತಿತರಾದರು. ಈ ಪತ್ರಕರ್ತ ತಮ್ಮ ಮಾನ ಸರ್ವನಾಶ ಮಾಡಲೆಂದೇ ಈ ಪುಸ್ತಕ ಬರೆದಿರುತ್ತಾನೆಂದು ಮಂತ್ರಿಗಳಿಗೆ ಖಾತ್ರಿಯಾಯಿತು. ಮೊದಲ ಪುಟದಿಂದ ಕೊನೆಯ ಪುಟದವರೆಗೂ ಇಡೀ ಪುಸ್ತಕವನ್ನು ಕೆಲವೇ ಗಂಟೆಯಲ್ಲಿ ಮಂತ್ರಿಗಳು ಓದಿ ಮುಗಿಸಿದರು.

ತಮ್ಮ ಜೀವನ ಚರಿತ್ರೆಯ ಕೊನೆಯ ಪುಟ ಓದುತ್ತಿದ್ದಂತೆ ಮಂತ್ರಿಗಳಿಗೆ ತಲೆ ಸುತ್ತಿ ಬಂದಂತಾಗಿ ಮಂಚದ ಮೇಲೆ ಕುಳಿತು ಬಲಗೈಯಿಂದ ತಮ್ಮ ಕಣ್ಣುಗಳನ್ನು ಬಲವಾಗಿ ಉಜ್ಜಿಕೊಂಡು ಮೈ ಮುರಿದು ವಾಶ್ ರೂಮಿಗೆ ಹೋಗಿ ಬಂದರು. ನಿಲುಗನ್ನಡಿಯ